(ಗೊಂದಲ)

ಶ್ರೀ ಕೆ. ಹರ್ಷಕುಮಾರ ಗೌಡ:– ಅವರು ತಮ್ಮ ಮಾತನ್ನು ವಾಪಸ್ಸು ತೆಗೆದುಕೊಳ್ಳಬೇಕು.

ಛೇರ್ಮನ್:– ಒಟ್ಟಿಗೆ ಎಲ್ಲರೂ ಮಾತನಾಡಿದರೆ ಯಾವುದೂ ರೆಕಾರ್ಡಿಗೆ ಹೋಗುವುದಿಲ್ಲ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಕೆ. ಹರ್ಷಕುಮಾರ ಗೌಡ:– ರಾಮನ ಹೆಸರು ಇಟ್ಟುಕೊಂಡು ಭಿಕ್ಷೆ ಬೇಡುವವರು .....

ಛೇರ್ಮನ್:– ಹರ್ಷಕುಮಾರ ಗೌಡರು ದಯವಿಟ್ಟು ಕುಳಿತುಕೊಳ್ಳಬೇಕು. ಮಿನಿಮಂ ಡಿಸಿಪ್ಲೀನ್ ಆದರೂ ಕಾಪಾಡಿಕೊಂಡು ಹೋಗದಿದ್ದರೆ ಹೇಗೆ ?

ಶ್ರೀ ಕೆ. ಹರ್ಷಕುಮಾರ ಗೌಡ:– ರಾಮನ ಹೆಸರು ಹೇಳಿಕೊಂಡು ಭಿಕ್ಷೆ ಬೇಡುತ್ತೇವೆಯೆ ?

ಶ್ರೀ ಹಾರ್ನಳ್ಳಿ ರಾಮಸ್ವಾಮಿ:– ಅಧ್ಯಕ್ಷರು ನಿಂತಾಗ ಯಾರೂ ಎದ್ದು ನಿಲ್ಲಬಾರದು.

ಶ್ರೀ ಬಿ.ಎಸ್. ಯಡಿಯೂರಪ್ಪ:– ನನ್ನ ಮಾತನ್ನು ಮುಗಿಸುತ್ತಿದ್ದೇನೆ. ತಾವು ನನಗೆ ಸಾಕಷ್ಟು ಸಮಯ ಕೊಟ್ಟಿದ್ದೀರಿ. ಆ ಕಡೆ ಕುಳಿತಿರತಕ್ಕ ಸ್ನೇಹಿತರಿಗೆ ಪ್ರಾರ್ಥನೆ, ಇದಕ್ಕೆ ಪರಿಹಾರ ಅಂದರೆ ದಯವಿಟ್ಟು ಈಗಲಾದರೂ ರಾಜ್ಯದಲ್ಲಿ, ದೇಶದಲ್ಲಿ ಶಾಂತಿ ಸುವ್ಯವಸ್ಥೆ ತರುವಂಥ ಪ್ರಾಮಾಣಿಕ ಪ್ರಯತ್ನವನ್ನು ನಾವು ನೀವು ಎಲ್ಲಾ ಸೇರಿ ಮಾಡೋಣ. ಇದಕ್ಕೆ ಸರಿಯಾದ ಸಮಾನ ಕಾನೂನು ಜಾರಿಗೆ ತರುವ ದೃಷ್ಟಿಯಿಂದ ಕಾಮನ್ ಸಿವಿಲ್ ಕೋಡ್ ಜಾರಿಗೆ ತರುವ ಪ್ರಯತ್ನ ಮಾಡಿ. 370 ನೇ ವಿಧಿಯನ್ನು ಸಂಪೂರ್ಣ ರದ್ದು ಮಾಡುವಂತೆ ಈಗಲಾದರೂ ಪ್ರಯತ್ನ ಮಾಡಿ. ಆರ್ಟಿಕಲ್ 29–30ನ್ನು ರದ್ದು ಮಾಡಿ. ಆಗ ಅಣ್ಣ ತಮ್ಮಂದಿರಂತೆ ಬಾಳುವಂತೆ, ಅವಕಾಶ ಆಗುತ್ತದೆ. ರಾವಣನ ವಂಶದವರಾಗ ಬೇಡಿ, ರಾಮನ ವಂಶದವರಾಗಿ. 6ನೇ ತಾರೀಖಿನ ಘಟನೆ ಪುನರಾವರ್ತನೆ ಆಗದಿರಲಿ. ಒಳ್ಳೆಯ ಕೆಲಸ ಮಾಡಿ ಪುಣ್ಯ ತಂದುಕೊಳ್ಳುವಂಥ ಶಕ್ತಿಯನ್ನು ಮಹಾತ್ಮ ಗಾಂಧಿ, ಶ್ರೀರಾಮಚಂದ್ರ ಕೊಡಲಿ. ಜೈ ಶ್ರೀ ರಾಮ. ನಮಸ್ಕಾರ.

(ಮಾನ್ಯ ಉಪಾಧ್ಯಕ್ಷಿಣಿಯವರು ಪೀಠವನ್ನಲಂಕರಿಸಿದರು)

ಉಪಾಧ್ಯಕ್ಷಿಣಿಯವರು:– ಈ ಚರ್ಚೆಯನ್ನು ನಾಳೆ ತೆಗೆದುಕೊಳ್ಳೋಣ. ಮಾನ್ಯ ಮಂತ್ರಿಗಳು ಎರಡು ಬಿಲ್ಲುಗಳನ್ನು ಪಾಸ್ ಮಾಡಿಕೊಡಬೇಕೆಂದು ಹೇಳುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್:– ಮುಖ್ಯ ಮಂತ್ರಿಗಳು ಬರಲಿ ಎಂದು ಬೆಳಿಗ್ಗೆ ಹೇಳಿದ್ದಿರಿ. ಬೆಳಗಾವಿ ಮೇಯರ್ .....

ಉಪಾಧ್ಯಕ್ಷಿಣಿಯವರು:– ಆಯಿತು. ಮೊದಲು ಮಸೂದೆಗಳನ್ನು ಮುಗಿಸಿ ಆಮೇಲೆ ಅದಕ್ಕೆ ಬರೋಣ.

ಶಾಸನ ರಚನಾ ಕಾರ್ಯಕಲಾಪಗಳು

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):– ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯ (ಅಮೆಂಡ್‌ಮೆಂಟ್) ಬಿಲ್ ಈಗಾಗಲೇ ಇಂಟ್ರಡ್ಯೂಸ್ ಆಗಿದೆ. ನಂತರ,

KARNATAKA COURT–FEES AND SUITS VALUATION (AMENDMENT) BILL, 1992